ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಖಾಸಗಿ ಬಸ್‌ಗಳನ್ನು ಬಾಡಿಗೆಗೆ ಪಡೆದಿರುವ ವಿಚಾರ.

636 (5813) ಶ್ರೀ ಜಗದೀಶ್ ಶೆಟ್ಟರ್. (ಹುಬ್ಬಳ್ಳಿಗ್ರಾಮೀಣ) ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು : ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆಯಲ್ಲಿ ಖಾಸಗಿ ಬಸ್‌ಗಳ ಅವಶ್ಯಕತೆ ಇಲ್ಲದಾಗ್ಯೂ ಸುಮಾರು ಸಾವಿರಕ್ಕೂ ಹೆಚ್ಚು ಬಸ್‌ಗಳನ್ನು ಖಾಸಗಿ ಮಾಲೀಕರಿಂದ ಬಾಡಿಗೆಗೆ ತೆಗೆದುಕೊಳ್ಳಲಾಗಿದೆ ಎನ್ನುವ ವಿಷಯ ನಿಜವೇ;

ಆ. ಸಂಸ್ಥೆಯ ಕೆಲವೊಂದು ಅಧಿಕಾರಿಗಳು ಮತ್ತು ಕೆಲವೊಂದು ಪ್ರಭಾವಿ ರಾಜಕೀಯ ವ್ಯಕ್ತಿಗಳಿಗೆ ಸಂಬಂಧಪಟ್ಟಂತೆ ಬಸ್‌ಗಳನ್ನು ಬಾಡಿಗೆಗೆ ತೆಗೆದುಕೊಂಡಿದ್ದು ನಿಜವೇ;

ಇ. ಎಷ್ಟು ಖಾಸಗಿ ಬಸ್‌ಗಳನ್ನು ತೆಗೆದುಕೊಳ್ಳಲಾಗಿದೆ; ಈ ಬಸ್‌ಗಳ ಮಾಲೀಕರು ಯಾರು (ವಿವರ ನೀಡುವುದು);

ಈ. ಖಾಸಗಿ ಬಸ್‌ಗಳನ್ನು ರದ್ದುಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು.)

ಅ. ಇಲ್ಲ.

ಆ. ಇಲ್ಲ.

ಇ. 557. ಅನುಬಂಧದಲ್ಲಿ ನೀಡಿದೆ.

ಈ. ಹಂತ ಹಂತವಾಗಿ ಸಂಸ್ಥೆಯ ವಾಹನಗಳನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು.

ANNEXURE

Sl. No.	Owner Name	No. of Buses
1.	C. L. Sridhar	31
2.	Anand Babu	09
3.	Mohd. Arif	10
4.	Matheen	20
5.	Razak	04
6.	Sai travels	09
7.	Abdul Aziz	09
8.	K. muralidhar	05
9.	Yadireddy	05
10.	Thaiba Begum	05

11.	Sabiha Sultana	05
12.	Abdul Shahajade	05
13.	S. S. Sohrab	05
14.	Nuruliah	05
15.	G. P. R. Travels	09
16.	Maa Travels	10
17.	Chetak travels	05
18.	G. N. Narvekar	05
19.	S. P. Gurudatta	18
20.	Itekar Travels	05
21.	D. Nitayanand	10
22.	K. N. Bhaskar	05
23.	D. Jaram	10
24.	M. Rangraju	11
25.	Nimishamha	05
26.	T. Ramesh	05
27.	M. B. Chavan	05
28.	M. S. Palakshan	06
29.	K. Venkatappa	05
30.	R. V. Reddy	05
31.	M. R. Palaniyappa	15
32.	U. B. shedgali	05
33.	Abdul Munaf	05
34.	Padmakar Prabhu	05
35.	K. Prabhakar Prabhu	05
36.	Mrari. N. Naik	05
37.	Deelip Rokhade	05
38.	M. M. Malagi	05
39.	L. H. Patagar	05
40.	Satish kumar Sherry	05
41.	Ashok Kumar Shetty	05
42.	S. J. Naik	05
43.	S. j. Narvekar	10
44.	Roshini Bhat	05
45.	V. R. Mubareddy	05

46.	S. B. Sankannavar	05
47.	B. P. Huchachannavar	05
48.	Jyothi S. Chalgeri	07
49.	S. S. Hiremath	05
50.	G. K. vadavadagi	05
51.	A. G. Sangalad	05
52.	Praveen Chandra	04
53.	M. S. Belerre	08
54.	Sunitha Abbigeri	05
55.	Nandha Abbigeri	05
56.	M. G. Hiremath	05
57.	M. D. Ashok Kumar	15
58.	R. Hiremath	05
59.	Udaya K. Bijuur	05
60.	N. M. Kattimani	05
61.	K. Murugan	05
62.	Jayavarma	08
63.	Ramakrishna R. K.	10
64.	B. V. Mahanraj	16
65.	K. N. Prakash	06
66.	C. D. Kale	26
67.	Nazeerulla Shariff	05
68.	R. N. Banakar	19
69.	G. Arvindareddy	10
70.	Basagane	05
71.	B. S. Thalikoti	06
72.	Vasashree Gangoli	05
73.	Miss Kumadashree	06
74.	Abdul Ibrahim	01

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆಯಲ್ಲಿ ಖಾಸಗಿ ಬಸ್‌ಗಳನ್ನು ಸಾವಿರಾರು ಸಂಖ್ಯೆಯಲ್ಲಿ ತೆಗೆದುಕೊಂಡಿರುವುದಲ್ಲದೇ ಇವುಗಳನ್ನು ಪ್ರಭಾವಿ ವ್ಯಕ್ತಿಗಳಿಂದ ತೆಗೆದುಕೊಳ್ಳಲಾಗಿದೆ ಎಂದು ಪ್ರಶ್ನೆ ಕೇಳಿದ್ದಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ, ಎಷ್ಟು ಖಾಸಗಿ ಬಸ್‌ಗಳನ್ನು ತೆಗೆದು ಕೊಳ್ಳಲಾಗಿದೆ ಎಂದು ಮತ್ತೊಂದು ಪ್ರಶ್ನೆ ಕೇಳಿತಕ್ಕಂಥದ್ದಕ್ಕೆ 557 ಬಸ್‌ಗಳನ್ನು ಖಾಸಗಿಯವರಿಂದ

ತೆಗೆದುಕೊಳ್ಳಲಾಗಿದೆ ಎಂದು ಉತ್ತರ ಕೊಟ್ಟಿದ್ದೀರಿ. ಒಂದು ಕಡೆ ಇಲ್ಲ ಎಂದು ಉತ್ತರ ಕೊಡುವುದು ಮತ್ತೊಂದು ಕಡೆ ಈ ರೀತಿ ಹೇಳಿರತಕ್ಕಂಥದ್ದು ಸರಿಯೇ? ಸಾವಿರ ಬಸ್‌ಗಳನ್ನು ತೆಗೆದುಕೊಂಡಿಲ್ಲ ಕೇವಲ 500 ಬಸ್‌ಗಳನ್ನು ತೆಗೆದುಕೊಂಡಿದ್ದೇವೆ ಎಂದಾದರೂ ಹೇಳಬೇಕಲ್ಲವೆ?

ಶ್ರೀ ಬಸವರಾಜ್ ರಾಯರೆಡ್ಡಿ : ಪ್ರಭಾವಿ ವ್ಯಕ್ತಿಗಳಿಂದ ಎಂದು ನೀವು ಕೇಳಿರತಕ್ಕಂಥ ಪ್ರಶ್ನೆಗೆ ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ಅದು ಕೂಡ ಇಲ್ಲಿದೆ. ನಾನು ಈ ಸಂದರ್ಭದಲ್ಲಿ ಕೇಳತಕ್ಕಂಥ ಪ್ರಶ್ನೆ ಏನೆಂದರೆ, ಇವತ್ತಿನದಿವಸ ನಿಮ್ಮ ಸಾರಿಗೆ ಸಂಸ್ಥೆಯಲ್ಲಿ ಸಾಕಷ್ಟು ಬಸ್‌ಗಳಿವೆ. ಅಥವಾ ಇನ್ನು ಸಾವಿರ ಬಸ್‌ಗಳನ್ನು ಖರೀದಿ ಮಾಡತಕ್ಕಂಥ ಕೆಪ್ಯಾಸಿಟಿ ನಿಮಗೆ ಇದೆ. ಆದರೆ, ಖಾಸಗಿ ಬಸ್‌ನ ಮಾಲೀಕರಿಂದ ಬಸ್‌ಗಳನ್ನು ತೆಗೆದುಕೊಳ್ಳತಕ್ಕಂಥ ಅವಶ್ಯಕತೆ ನಿಮಗೆ ಏಕೆ ಬಂತು? ಮತ್ತೆ ಇದರಿಂದ ನಿಮಗೆ ಏನಾದರೂ ಲಾಭವಾಗಿದೆಯೇ? ಇದಕ್ಕೆ ತಾವು ದಯವಿಟ್ಟು ಉತ್ತರ ಕೊಡಿ.

ಶ್ರೀ ಆರ್. ವಿ. ದೇಶಪಾಂಡೆ (ಸಹಕಾರ ಸಚಿವರು) (ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಕೆಎಸ್‌ಆರ್‌ಟಿಸಿ ಇವತ್ತಿನ ದಿವಸ ಯಾವ ಪ್ರಕಾರ ನಡೆಯುತ್ತಿದೆ ಎನ್ನತಕ್ಕಂಥದ್ದು ತಮಗೆ ಗೊತ್ತಿದೆ. ಇವತ್ತು ಏನಾಗಿದೆ ಎಂಬುದನ್ನು ತಾವು ದಯವಿಟ್ಟು ತಿಳಿದುಕೊಳ್ಳಬೇಕಾಗಿದೆ. ಇವತ್ತು ಡಿಮಾಂಡ್ ಬಹಳ ಇದೆ. ಇದಕ್ಕೆ ರಿಸೋರ್ಸ್ ಮೊಬಿಲೈಸ್ ಆಗಬೇಕಾಗಿದೆ. ಇವತ್ತು ಡೀಸೆಲ್ ರೇಟ್ ಜಾಸ್ತಿಯಾಗಿರುವುರಿಂದ ದರವನ್ನು ಜಾಸ್ತಿ ಮಾಡುತ್ತೇವೆಂದು ಹೇಳಿದರೆ ತಾವೂ ಕೂಡ ಇದರ ಬಗ್ಗೆ ಗಲಾಟೆ ಮಾಡುತ್ತೀರಿ. ದಯವಿಟ್ಟು ತಾವು ಇದನ್ನು ಅರ್ಥಮಾಡಿಕೊಳ್ಳಬೇಕು. ಬಸ್ ಫೇರ್ ಜಾಸ್ತಿ ಮಾಡುತ್ತೀರೆಂದು ತಾವು ಗಲಾಟೆ ಮಾಡುತ್ತೀರಿ, ಇದು ತಪ್ಪು ಅಲ್ಲ. ಏಕೆಂದರೆ ವಿರೋಧಪಕ್ಷದಲ್ಲಿ ನಾವು ಇದ್ದಾಗ ಅದೇ ಕೆಲಸವನ್ನು ಮಾಡಿದ್ದೇವೆ. ನಾನು ಹೇಳತಕ್ಕಂಥದ್ದನ್ನು ತಾವು ಸ್ವಲ್ಪ ಕೇಳಿ. ಈಗ 557 ಬಸ್‌ಗಳನ್ನು ಬಾಡಿಗೆ ಆಧಾರದ ಮೇಲೆ ತೆಗೆದುಕೊಂಡಿದ್ದಾರೆ. ಮತ್ತೆ ಇವತ್ತು ಮಾಯುಮ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಎಷ್ಟು ರಿಸೋರ್ಸ್ ಸಾಧ್ಯವಿದೆಯೋ ಅಷ್ಟು ಬಸ್‌ಗಳನ್ನು ಹಾಕಲಾಗಿದೆ. ಹಾಗೆಯೇ, ರಿಸೋರ್ಸ್ ಸ್ವಲ್ಪ ಕೊರತೆ ಇರುವುದರಿಂದ ನಾವು ಈ ವ್ಯವಸ್ಥೆಯನ್ನು ನಡೆಸಿಕೊಂಡು ಹೋಗಬೇಕಾಗಿದೆ. ಈ ಒಂದು ವ್ಯವಸ್ಥೆಯಲ್ಲಿ ಇವರಿಗೆ ಹಾನಿ ಏನು ಇಲ್ಲ. ಒಂದು ಕಿಲೋಮೀಟರ್‌ಗೆ ಸುಮಾರು 80 ರಿಂದ 90 ಪೈಸೆ ಲಾಭ ಸಿಗುತ್ತದೆ. ಎಲ್ಲಾ ಬಸ್ ಕೆಎಸ್‌ಆರ್‌ಟಿಸಿ ಮೂಲಕವೇ ಆಗಬೇಕೆಂದು ತಾವು ಹೇಳತಕ್ಕಂಥದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದೆಲ್ಲಾ ಆಗಬೇಕಾದರೆ ರಿಸೋರ್ಸ್ ಬೇಕಾಗುತ್ತದೆ. ಬಸ್ ಹಾಕಬೇಕೆಂದು ಸಾರ್ವಜನಿಕರ ಡಿಮ್ಯಾಂಡ್ ಕೂಡ ಒಂದು ಕಡೆ ಇರುತ್ತದೆ. ಹಾಗೆಯೇ ಬಸ್ ಹಾಕಬೇಕೆಂದು ಜನಪ್ರತಿನಿಧಿಗಳೂ ಸಹ ಹೇಳುತ್ತಾರೆ. ಆದರೆ, ರಿಸೋರ್ಸ್ ಕಡಿಮೆ ಇರುವುದರಿಂದ ಬಸ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ರಿಸೋರ್ಸ್ ಪೊಜಿಷನ್ ಇಂಪ್ರೂ ಆದಂಥೆಲ್ಲಾ ಸ್ವಲ್ಪ ಸ್ವಲ್ಪ ವಿತ್‌ಡ್ರಾ ಮಾಡಿ ಕೆಎಸ್‌ಆರ್‌ಟಿಸಿ ಸ್ವಂತ ಬಸ್‌ಗಳನ್ನು ಹಾಕತಕ್ಕಂಥ ವ್ಯವಸ್ಥೆ ಮಾಡುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ನೀವು ಇವತ್ತಿನದಿವಸ ಖಾಸಗಿಯವರಿಂದ ಬಸ್‌ಗಳನ್ನು ತೆಗೆದುಕೊಂಡಿದ್ದೀರಿ. ಆದರೆ, ನಿಮ್ಮ ಸಾರಿಗೆ ಸಂಸ್ಥೆಯ ನಿಯಂತ್ರಣ ಅವರ ಮೇಲೆ ಇಲ್ಲ. ಆ ಬಸ್‌ನ ಡ್ರೈವರ್ ಇರಬಹುದು. ಅಥವಾ ಇನ್ನೊಬ್ಬ ಸಿಬ್ಬಂದಿ ಇರಬಹುದು ಅಥವಾ ಅದರ ಮೇಂಟೆನೆನ್ಸ್ ಇರಬಹುದು ಈ ಒಂದು ಬಸ್‌ಗಳ ಮೇಲೆ ನಿಮ್ಮ ಸಾರಿಗೆ ಸಂಸ್ಥೆಯ ಯಾವುದೇ ಒಂದು ನಿಯಂತ್ರಣ ಇಲ್ಲ. ಅವರು ಸಾರ್ವಜನಿಕರ ಜೊತೆಯಲ್ಲಿ ಯಾವ ರೀತಿಯಾಗಿ ವರ್ತನೆ ಮಾಡುತ್ತಾರೆ ಎನ್ನತಕ್ಕಂಥದ್ದು ನಿಮಗೆ ಗೊತ್ತಿಲ್ಲ. ಮತ್ತೆ ಅವರು ಯಾವರೀತಿಯಾಗಿ ಪ್ರಯಾಣಿಕರನ್ನು ಸುರಕ್ಷಿತವಾಗಿ ಕರೆದುಕೊಂಡು ಹೋಗುತ್ತಾರೆ ಎನ್ನತಕ್ಕಂಥದ್ದೂ ನಿಮಗೆ ಗೊತ್ತಿಲ್ಲ. ಇದು ಅವರಿಗೂ ಕೂಡ ಗೊತ್ತಿದೆ.

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೆ, ತಾವು ಬಹಳ ಚೆನ್ನಾಗಿ ಹೇಳಿದ್ದೀರಿ. ನೀವು ಹೇಳಿದ ಪ್ರಕಾರ ಬಸನ್ನೇ ಹತ್ತುವ ಹಾಗಿಲ್ಲ ಎನ್ನುವ ಹಾಗೆ ಆಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಆ ರೀತಿ ಎನೂ ಇಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಸಿಂಧ್ಯಾ ರವರಿಗೆ ಎಲ್ಲಾ ಗೊತ್ತಿದ್ದರೂ ಅವರು ಸುಮ್ಮನೆ ಕುಳಿತುಕೊಂಡಿದ್ದಾರೆ. ಆದರೆ, ಪಾಪ ಇವರು ಕಷ್ಟ ಪಡುತ್ತಿದ್ದಾರೆ. ಇದು ಇಲ್ಲಿರತಕ್ಕಂಥ ಡಿಫರೆನ್ಸ್.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಈ ಖಾಸಗಿ ಬಸ್‌ನ ಡ್ರೈವರ್ ಯಾವರೀತಿಯಾಗಿ ಲೈಸೆನ್ಸ್ ಪಡೆದಿದ್ದಾರೆ ಮತ್ತು ಸರಿಯಾಗಿ ಡ್ರೈವಿಂಗ್ ಬರುತ್ತದೆಯೋ ಎನ್ನತಕ್ಕಂಥದ್ದು ಗೊತ್ತಿಲ್ಲ. ಖಾಸಗಿ ಬಸ್‌ನವರು ಯಾವ ಡ್ರೈವರ್‌ನ್ನು ಕಳುಹಿಸಿ ಕೊಟ್ಟಿರುತ್ತಾರೆಯೋ ಆ ಬಸ್‌ನಲ್ಲಿ ನಾವು ಕುಳಿತುಕೊಳ್ಳಬೇಕಷ್ಟೆ. ಅವರಿಗೆ ಡ್ರೈವಿಂಗ್ ಲೈಸೆನ್ಸ್ ಇದೆಯೋ ಅಥವಾ ಇಲ್ಲವೋ ಎಂಬುದನ್ನು ಇವರೇನೂ ಟೆಸ್ಟ್ ಮಾಡುವುದಿಲ್ಲ. ಎಲ್ಲವನ್ನೂ ಅವರೇ ಮೆಂಟೇನ್ ಮಾಡುತ್ತಾರೆ. ಆಲಮಟ್ಟಿಯ ಕಾಲುವೆಗೆ ಖಾಸಗಿ ಗುತ್ತಿಗೆ ಇದ್ದಂಥ ಬಸ್ ಬಿದ್ದು 38 ಜನ ಅಲ್ಲಿ ಸತ್ತು ಹೋದರು. ಮತ್ತೆ ಇನ್ನೊಂದು ಕಡೆ ಇದೇ ರೀತಿಯಾದ ಘಟನೆ ಕೂಡ ಆಗಿದೆ. ಆದ್ದರಿಂದ ಸುರಕ್ಷತೆ ಪ್ರಶ್ನೆ ಇಲ್ಲದಂತೆ ಆಗಿದೆ. ಇದರಿಂದ ಪ್ರಯಾಣಿಕರು ಬಹಳಷ್ಟು ಅಧೈರ್ಯರಾಗಿದ್ದಾರೆ. ಮತ್ತೆ ಇದರಿಂದ ಸಾರಿಗೆ ಸಂಸ್ಥೆಗೆ ಲಾಸ್ ಆಗುತ್ತಿದೆ ಎಂದು ನಿಜವಾಗಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಆದ್ದರಿಂದ, ನೀವೇ ಸ್ವಂತ ಬಸ್‌ಗಳನ್ನು ಖರೀದಿ ಮಾಡಿ ಇವುಗಳೆಲ್ಲವನ್ನೂ ಅವಾಯ್ಡ್ ಮಾಡಿ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಇಂಥವುಗಳ ಬಗ್ಗೆ ತನಿಖೆ ಮಾಡತಕ್ಕಂಥದ್ದು ಮತ್ತು ಅವರಿಗೆ ಜವಾಬ್ದಾರಿ ಫಿಕ್ಸ್ ಮಾಡತಕ್ಕಂಥ ಕೆಲಸವನ್ನು ಈಗಾಗಲೇ ಕೆಎಸ್‌ಆರ್‌ಟಿಸಿ ತೆಗೆದುಕೊಂಡಿದೆ, ತಾವು ಇದನ್ನು ದಯವಿಟ್ಟು ಅರ್ಥಮಾಡಿಕೊಳ್ಳಬೇಕು. 557 ಖಾಸಗಿ ಬಸ್‌ಗಳಿವೆ. ಈ ಬಸ್‌ಗಳು ಒಂದೆರಡು ಕಡೆ ಅಪಘಾತಕ್ಕೆ ಒಳಗಾಗಬಹುದು. ಇವತ್ತು ಕೆಎಸ್‌ಆರ್‌ಟಿಸಿ ಬಸ್‌ಗಳ ಆಕ್ಸಿಡೆಂಟ್ ಆಗುವುದಿಲ್ಲವೆ? ಬಸ್ ಎಂದರೆ ಆಕ್ಸಿಡೆಂಟ್ ಆಗುತ್ತವೆ. ಈ ಬಸ್‌ಗಳಲ್ಲಿ ಚಾಲಕ ಖಾಸಗಿ ಬಸ್ ಕಡೆಯವರಿಂದ ಇರುತ್ತಾನೆ ಆದರೆ ಕಂಡಕ್ಟರ್ ನಮ್ಮವರೇ ಇರುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಹೇಳಿರತಕ್ಕಂಥ ಬಸ್ ಅಪಘಾತ ಸಂದರ್ಭದಲ್ಲಿ ನಿಮ್ಮ ಕಂಡಕ್ಟರ್ ಬಸ್‌ನ್ನು ಡ್ರೈವ್ ಮಾಡುತ್ತಿದ್ದ.

ಶ್ರೀ ಆರ್. ವಿ. ದೇಶಪಾಂಡೆ : ಅದು ನನಗೆ ಗೊತ್ತಿಲ್ಲ. ತಾವು ಇದರ ಬಗ್ಗೆ ಬರೆದು ಕೊಡಿ. ನಾನು ಇದರ ಬಗ್ಗೆ ತನಿಖೆ ಮಾಡಿಸುತ್ತೇನೆ. ಆದಷ್ಟು ಮಟ್ಟಿಗೆ ಕೆಎಸ್ಆರ್‌ಟಿಸಿ ಬಸ್ ಹಾಕಬೇಕೆಂದು ನಾನೂ ಸಹ ಒಪ್ಪಿಕೊಳ್ಳುತ್ತೇನೆ. ಆದ್ದರಿಂದ, ರಿಸೋರ್ಸ್ ಕಂಡೀಷನ್ ಇಂಪ್ರೂವ್ ಆದ ನಂತರ ಖಂಡಿತ ಕ್ರಮೇಣ ನಮ್ಮ ಬಸ್‌ಗಳನ್ನು ಹಾಕಿ ಖಾಸಗಿ ಬಸ್‌ಗಳನ್ನು ವಿತ್‌ಡ್ರಾ ಮಾಡುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಏನಾಗಿದೆ ಎಂದರೆ, ಪ್ರಭಾವಿ ರಾಜಕಾರಣಿಗಳು ಮತ್ತು ಅಧಿಕಾರಿಗಳು ಇದರ ಒಂದು ವಸೂಲಿ ಬಾಜಿಯಾಗಿ ಈ ಖಾಸಗಿ ಬಸ್‌ಗಳ ಒಂದು ವ್ಯವಹಾರ ಆಗಿದೆ. ಖಾಸಗಿ ಬಸ್‌ನವರ ಒಂದು ಲಿಸ್ಟನ್ನು ತಾವು ಕೊಟ್ಟಿದ್ದೀರಿ. ಇದರಲ್ಲಿರತಕ್ಕಂಥ ಎಸ್.ಎಸ್.ಸೌರಬ್ ಎಂಬುವವರು ನಿಮ್ಮ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಎಂ. ಡಿ. ಆಗಿದ್ದರು. ಅವರು ಈಗ ಆ ಬಸ್‌ಗಳನ್ನು ಕೊಟ್ಟಿದ್ದಾರೆ. ಮತ್ತೆ ನಾರ್ವೇಕರ್ ಎಂಬುವವರು ಉಪಾಧ್ಯಕ್ಷರಾಗಿದ್ದರು. ಇನ್ನು ಬಹಳಷ್ಟು ಜನರು ಇದರಲ್ಲಿದ್ದಾರೆ. ಇಲ್ಲಿ ಏನಾಗಿದೆ ಎಂದರೆ, ಅವರು ತಮ್ಮ ಮೇಲೆ ಅವರ ಒಂದು ಅಧಿಕಾರ ಮತ್ತು ರಾಜಕಾರಣದ ಪ್ರಭಾವ ಬೀರಿ ಇವತ್ತಿನದಿವಸ ನಿಮಗೆ ಅವಶ್ಯಕತೆ ಇಲ್ಲದೆ ಇರತಕ್ಕಂಥ ಸಂದರ್ಭದಲ್ಲಿಯೂ ಸಹ ಖಾಸಗಿ ಬಸ್‌ಗಳನ್ನು ನಿಮ್ಮ ಸಂಸ್ಥೆಗೆ ತುರುಕುತ್ತಿದ್ದಾರೆ. ಇದು ಸರಿಯಲ್ಲವೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಇದು ಟೆಂಡರ್ ಪ್ರೋಸೆಸ್ ಮೂಲಕ ಆಗುತ್ತದೆ. ನಾವು ಅವರನ್ನು ಕರೆಸಿ ನೀವೊಂದು 10 ಬಸ್ ಅಥವಾ 20 ಬಸ್ ಹಾಕಿ ಎಂದು ಹೇಳಿಲ್ಲ. ಅಲ್ಲಿ ಟೆಂಡರ್ ಪ್ರೋಸೆಸ್ ಆಗಿದೆ. ಈ ಟೆಂಡರ್‌ನಲ್ಲಿ ಯಾರು ಬೇಕಾದರೂ ಭಾಗವಹಿಸಬಹುದಾಗಿದೆ. ಅಲ್ಲಿ ನಡೆದಿರತಕ್ಕಂಥ ಟೆಂಡರ್ ಪ್ರೋಸೆಸ್ ಪಾರದರ್ಶಕವಾಗಿ ನಡೆದಿಲ್ಲವೆಂದು ತಾವು ಹೇಳಿದರೆ ನಾನು ಅದನ್ನು ವಿಚಾರ ಮಾಡಿಸುತ್ತೇನೆ. ನಾನೂ ಇನ್ನೊಂದು ಸಲಹೆಯನ್ನು ಕೊಡುತ್ತೇನೆ, ಟ್ರಾನ್ಸ್‌ಫರೆನ್ಸಿ ಇಲ್ಲ, ಟೆಂಡರ್ ಮಾಡಿಲ್ಲ, ಹಾಗೆ ಕೊಟ್ಟಿದ್ದರೆ ಹೇಳಿ ಇದರ ಬಗ್ಗೆ ಎನ್‌ಕ್ವಾಯರಿ ಮಾಡಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಟೆಂಡರ್‌ಗಳೆಲ್ಲವನ್ನೂ ಸದನದ ಮುಂದೆ ಇಡಿ, ಪ್ರೋಸಿಜರ್ ಏನು ಮಾಡಿದ್ದಾರೆಂಬುದು ಗೊತ್ತಾಗುತ್ತದೆ. ಅದರ ಬಗ್ಗೆ ನಾವು ಪ್ರಾಮಾಣಿಕವಾಗಿ ಹೇಳುತ್ತೇನೆ, ದಯವಿಟ್ಟು ಸಾರಿಗೆ ಸಂಸ್ಥೆ ಲಾಭದಾಯಕವಾಗಬೇಕಾದರೆ ಈ ಖಾಸಗಿ ಬಸ್ಸುಗಳನ್ನು ಹೊರಗೆ ಹಾಕಬೇಕು. ಸುಮ್ಮನೆ ಯಾವುದೋ ಇನ್‌ಫ್ಲೂಯೆನ್ಸ್‌ನಿಂದ ಖಾಸಗಿ ಬಸ್‌ಗಳನ್ನು ತೆಗೆದುಕೊಂಡಿದ್ದಾರೆ. ನಿಮ್ಮ ಸಾರಿಗೆ ಸಂಸ್ಥೆಯ ಮೇಲೆ ಅದರಿಂದ ದೊಡ್ಡ ಬರ್ಡನ್ ಆಗುತ್ತದೆ. ಅವೆಲ್ಲವನ್ನೂ ತೆಗೆದು ಹೊರಗೆ ಹಾಕಿ. ಆ ರೀತಿಯಾಗಿ ಒಂದು ಸಲ ಧೈರ್ಯ ಮಾಡಬೇಕು.

ಶ್ರೀ ಆರ್. ವಿ. ದೇಶಪಾಂಡೆ : ತಾವು ಹಲವಾರು ಸಲಹೆಗಳನ್ನು ಕೊಟ್ಟಿದ್ದೀರಿ, ಬಂದ್ ಮಾಡುವಂತೆ ಸಲಹೆಯನ್ನು ಕೊಟ್ಟಿದ್ದೀರಿ, ಕೆಎಸ್ಆರ್‌ಟಿಸಿ ಯವರಿಗೆ ಅದರ ಬಗ್ಗೆ ಎಕ್ಸಾಮಿನ್ ಮಾಡುವುದಕ್ಕೆ ಹೇಳುತ್ತೇನೆ. ತಾವು ತಿಳಿದುಕೊಳ್ಳಬೇಕು, ಈ ವ್ಯವಸ್ಥೆಯು 200203 ರಿಂದ ಪ್ರಾರಂಭವಾಗಿದೆ.